ಕೃಷಿ ಅಭಿವೃದ್ಧಿ ಯೋಜನೆ ಅಡಿ ಕಬ್ಬು ಬೆಳೆಗಾರರಿಗೆ ಸಾಲ

285 (600) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ):- ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಬೆಳಗಾವಿ ಜಿಲ್ಲೆಯ ಶ್ರೀ ದೂಧ್‌ಗಂಗಾಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಮಧ್ಯಸ್ಥಿಕೆಯಲ್ಲಿ ಎಷ್ಟು ರೈತ ಸದಸ್ಯರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕೃಷಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸಾಲ ನೀಡಲಾಗಿತ್ತು ; ಸದರಿ ರೈತ ಸದಸ್ಯರು ಯಾರ್ಯಾರು ; ಯಾವ ದಿನಾಂಕದಂದು ಆ ರೈತರಿಗೆ ಸಾಲವನ್ನು ವಿತರಿಸಲಾಯಿತು ;

ಆ) ಆ ಸಾಲವನ್ನು ತುಂಬಲು ಎಷ್ಟು ಕಾಲಾವಕಾಶ ನೀಡಲಾಗಿತ್ತು. ಈ ಯೋಜನೆ ಅಡಿ ಸಾಲ ಪಡೆದುಕೊಂಡ ರೈತ ಸದಸ್ಯರಿಂದ ಯಾವ ರೀತಿ ಕಾರ್ಖಾನೆಯು ಮರುಪಾವತಿ ಮಾಡಿಸಿಕೊಂಡಿದೆ ; ನೇರವಾಗಿ ಹಣ ವಸೂಲಿ ಮಾಡಿದ್ದಾರೆಯೇ ಅಥವಾ ಕಬ್ಬು ಪೂರೈಸಿದ ನಂತರ ಸದರಿ ಕಬ್ಬಿನ ಬಿಲ್ಲಿನಲ್ಲಿ ಸಾಲ ಹಾಗು ಬಡ್ಡಿಯನ್ನು ಕಡಿತ ಮಾಡಿಕೊಳ್ಳಲಾಗಿದೆಯೇ ? (ವಿವರ ನೀಡುವುದು)

ಇ) ರೈತರಿಂದ ಯಾವ್ಯಾವ ದಿನಾಂಕಗಳಂದು ಮರುಪಾವತಿ ಮಾಡಿಸಿಕೊಳ್ಳಲಾಗಿದೆ ; ಸಾಲ ನೀಡಿದ ಬ್ಯಾಂಕಿಗೆ ಯಾವ ದಿನಾಂಕಗಳಂದು ಮರುಪಾವತಿ ಮಾಡಲಾಗಿದೆ ; ಸಾಲ ಪಡೆದುಕೊಂಡ ರೈತರ ಪೈಕಿ ಕಾರ್ಖಾನೆಯವರು ಬ್ಯಾಂಕಿಗೆ ಮರುಪಾವತಿ ಮಾಡಿದ ಸಾಲ ಮತ್ತು ಬಡ್ಡಿಯ ವಿವರ ಒದಗಿಸುವುದು ;

ಈ) ಈ ಸಾಲ ಪಡೆದುಕೊಂಡಿರುವ ರೈತರು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇವುಗಳು ಅನುಷ್ಠಾನಗೊಳಿಸಿರುವ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದುಕೊಂಡಿದ್ದಾರೆಯೇ, ಈ ಸೌಲಭ್ಯ ಪಡೆದುಕೊಂಡು ರೈತರು ಕಾರ್ಖಾನೆಗೆ ಪೂರೈಸಿರುವ ಕಬ್ಬಿನ ಬಿಲ್ಲಿನಲ್ಲಿ ಹಣ ಕಡಿತ ಮಾಡಿಕೊಂಡು ಬ್ಯಾಂಕಿಗೆ ಮರುಪಾವತಿ ಮಾಡಿಕೊಂಡಿದ್ದಾರೆಯೇ ; ಹೀಗೆ ಕಡಿತ ಮಾಡಿಕೊಂಡಿರುವ ಹಣವನ್ನು ಮರಳಿ ರೈತರಿಗೆ ನೀಡಲಾಗಿದೆಯೇ ; ಮರಳಿ ನೀಡಿದ್ದರೆ ಎಷ್ಟು ರೈತರಿಗೆ ನೀಡಲಾಗಿದೆ ? (ವಿವರ ಒದಗಿಸುವುದು)

ಶ್ರೀ ಎಸ್. ಎ. ರವೀಂದ್ರನಾಥ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು):–

ಅ) ಬೆಳಗಾವಿ ಜಿಲ್ಲೆಯ ಶ್ರೀ ದೂಧ್‌ಗಂಗಾಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಮಧ್ಯಸ್ಥಿಕೆಯಲ್ಲಿ 1999–2000ದ ಸಾಲಿನಲ್ಲಿ 6962 ರೈತ ಸದಸ್ಯರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ "ಕೃಷಿ ಅಭಿವೃದ್ಧಿ ಯೋಜನೆ" ಅಡಿಯಲ್ಲಿ ಒಟ್ಟು ರೂ. 16,13,10,000/– ಸಾಲ ನೀಡಲಾಗಿತ್ತು ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುವರು. ಬ್ಯಾಂಕ್‌ವಾರು ವಿವರವನ್ನು ಅನುಬಂಧ–1ರಲ್ಲಿ ನೀಡಿದೆ.

ಆ) ಈ ಸಾಲವನ್ನು ತುಂಬಲು 5 ವರ್ಷಗಳ ಕಾಲಾವಕಾಶ ನೀಡಲಾಗಿತ್ತು. ಈ ಯೋಜನೆಯಡಿ ಸಾಲ ಪಡೆದುಕೊಂಡ ರೈತ ಸದಸ್ಯರಿಂದ (1) ಅವರು ಕಾರ್ಖಾನೆಗೆ ಕಬ್ಬು ಪೂರೈಸಿದ ಬಿಲ್ಲಿನಲ್ಲಿ (2) ನಗದು ರೂಪದಲ್ಲಿ ಹಾಗೂ (3) ಜಾಮೀನುದಾರರುಗಳಿಂದ ಹಣ ವಸೂಲಿ ಮಾಡಿ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಒಟ್ಟು ರೂ. 2,03,491,844/– ಗಳನ್ನು ವಸೂಲಿ ಮಾಡಲಾಗಿದೆ ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುವರು. ವಿವರಗಳು ಈ ಕೆಳಕಂಡಂತಿದೆ.

ಕ್ರ ಸಂ.	ವಿವರ	ಸದಸ್ಯರುಗಳ ಸಂಖ್ಯೆ	ಸಾಲ ವಸೂಲಾತಿ ವಿವರ		
			ಅಸಲು	ಬಡ್ಡಿ	ಒಟ್ಟು
1	ಕಬ್ಬು ಬಿಲ್ಲಿನಲ್ಲಿ ಕಟಾವಣೆ ಮೂಲಕ	6526	126812060	43423239	170235299
2	ನಗದು ಹಣ	2648	19803116	6258491	26061607
3	ಹೊಂದಾಣಿಕೆ ಮೂಲಕ	1085	4597338	2597600	7194938
	ಒಟ್ಟು		151212514	52279330	203491844

ಇದಲ್ಲದೆ 572 ಸದಸ್ಯರು ಒಟ್ಟು ರೂ. 60,59,513/–ಗಳನ್ನು (ಅಸಲು ರೂ. 40,51,428/– ಬಡ್ಡಿ ರೂ. 20,08,085/– ಒಟ್ಟು ರೂ. 60,59,513/–) ನೇರವಾಗಿ ಬ್ಯಾಂಕಿಗೆ ಪಾವತಿ ಮಾಡಿರುತ್ತಾರೆ.

ಇ) ಕೃಷಿ ಅಭಿವೃದ್ಧಿ ಯೋಜನೆ ಅಡಿ ಸಾಲ ಪಡೆದುಕೊಂಡಿರುವ ರೈತರುಗಳಿಂದ ಕಾರ್ಖಾನೆಯು ವಸೂಲ್ಮಾಡಿದ ರೂ. 2034.91 ಲಕ್ಷಗಳಲ್ಲಿ 1876.97 ಲಕ್ಷಗಳನ್ನು

ಬ್ಯಾಂಕಿಗೆ ಮರುಪಾವತಿ ಮಾಡಿದೆ. ವ್ಯಕ್ತಿಗತವಾಗಿ ರೈತರುಗಳಿಂದ ಸಾಲ ವಸೂಲು ಮಾಡಿದ ದಿನಾಂಕ ಹಾಗೂ ಮೊತ್ತದ ವಿವರಗಳು ಕಾರ್ಖಾನೆಯಲ್ಲಿ ನಿರ್ವಹಿಸಲಾಗಿರುತ್ತದೆ ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುತ್ತಾರೆ.

ಈ) ರೈತ ಸದಸ್ಯರ ಬಾಕಿ ಉಳಿದ ಸಾಲವನ್ನು ಕೇಂದ್ರ ಸರ್ಕಾರವು ಸಾಲ ಮನ್ನಾ ಮಾಡಿದ ವಿವರ ಆಯಾ ಬ್ಯಾಂಕ್‌ಗಳೇ ನಿರ್ವಹಿಸಿರುವುದರಿಂದ ಸದರಿ ಮಾಹಿತಿ ಕಾರ್ಖಾನೆಯಲ್ಲಿ ಲಭ್ಯವಿರುವುದಿಲ್ಲ. ಕೃಷಿ ಅಭಿವೃದ್ಧಿ ಯೋಜನೆಯಡಿ ಪಡೆದುಕೊಂಡ ಸಾಲವನ್ನು ಪೂರ್ಣವಾಗಿ ಪಾವತಿ ಮಾಡಿ ಬ್ಯಾಂಕ್‌ಗಳಿಂದ ಬೇಬಾಕಿ ಪ್ರಮಾಣ ಪತ್ರ ಪಡೆದುಕೊಂಡು ದಾಖಲೆಗಳನ್ನು ಕಾರ್ಖಾನೆಗೆ ಒದಗಿಸಿರುವ 1970 ರೈತ ಸದಸ್ಯರುಗಳಿಗೆ ರೂ. 147.14 ಲಕ್ಷಗಳನ್ನು ಹಿಂದಿರುಗಿಸಲಾಗಿದೆ ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುತ್ತಾರೆ.

ಅನುಬಂಧ-1

ಕ್ರ. ಸಂ.	ಬ್ಯಾಂಕಿನ ಹೆಸರು	ಸಾಲಪಡೆದ ರೈತ ಸದಸ್ಯರ ಸಂಖ್ಯೆ	ಸಾಲದ ಮೊತ್ತ (ರೂ.ಗಳಲ್ಲಿ)
1	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನಿಪ್ಪಾಣಿ ಶಾಖೆ	759	1,78,40,000.00
2	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎ.ಡಿ.ಬಿ., ಚಿಕ್ಕೋಡಿ ಶಾಖೆ	1857	4,35,80,000.00
3	ಯುನೈಟೆಡ್ ವೆಸ್ಟ್ರನ್ ಬ್ಯಾಂಕ್, ನಿಪ್ಪಾಣಿ	2727	6,24,45,000.00
4	ಸಿಂಡಿಕೇಟ್ ಬ್ಯಾಂಕ್, ಸದಲಗ ಶಾಖೆ	458	1,06,15,000.00
5	ಸಿಂಡಿಕೇಟ್ ಬ್ಯಾಂಕ್, ಜುಗುಲ್ ಶಾಖೆ	538	1,23,80,000.00
6	ಸಿಂಡಿಕೇಟ್ ಬ್ಯಾಂಕ್, ಸೌದತ್ತಿ ಶಾಖೆ	571	1,32,45,000.00
7	ಸಿಂಡಿಕೇಟ್ ಬ್ಯಾಂಕ್, ಅಕ್ಕೋಲ್ ಶಾಖೆ	52	12,05,000.00
	ಮೊತ್ತ	6962	16,13,10,000.00

ಎಸ್.ಎಫ್.ಸಿ. ಅನುದಾನ

286 (602) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ):- ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-